# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ಹಣಕಾಸಿನ ನಷ್ಟ, ಆರೋಗ್ಯದಲ್ಲಿ ಏರುಪೇರು, ಅಧ್ಯಯನದಲ್ಲಿ ಹಿನ್ನಡೆ. ತಿಂಗಳ ಕೊನೆಯಲ್ಲಿ ಉದ್ಯೋಗದಲ್ಲಿ ಪ್ರತಿಕೂಲ ಪರಿಸ್ಥಿತಿಗಳು, ಮಾನಸಿಕ ಒತ್ತಡ. ನಿರುದ್ಯೋಗಿಗಳಿಗೆ ತಿಂಗಳ ಮಧ್ಯಭಾಗದಲ್ಲಿ ಭಾಗ್ಯೋದಯ. ವ್ಯಾಪಾರಸ್ಥರಿಗೆ ಉತ್ತಮ ಸಮಯ. ಶುಭ: 11, 19, 29 ಅಶುಭ: 15, 17, 27.



**ವೃಷಭ:** ಸರ್ಕಾರಿ ಕೆಲಸದಲ್ಲಿರುವವರಿಗೆ ಹಿಂಬಡ್ತಿ. ಮೇಲಧಿಕಾರಿಗಳಿಂದ ಕಿರಿಕಿರಿ. ಸ್ನಾಯುಗಳು ಮತ್ತು ನರಗಳಿಗೆ ಸಂಬಂಧಿಸಿದ ತೊಂದರೆಗಳು. ವೈವಾಹಿಕ ಜೀವನದಲ್ಲಿ ಕೋಪ–ತಾಪ. ದ್ವಿತೀಯಾರ್ಧದ ನಂತರ ಪರಿಸ್ಥಿತಿ ಅನುಕೂಲಕರವಾಗಲಿದೆ. ಶುಭ: 10, 16, 26 ಅಶುಭ: 15, 17, 28.



**ಮಿಥುನ:** ಕೆಲಸದಲ್ಲಿ ಯಶಸ್ಸು, ಹಣಕಾಸಿನ ಪ್ರಯೋಜನ. ಸಂಬಂಧಿಕರು, ಸ್ನೇಹಿತರು ಮತ್ತು ಆಪ್ತರನ್ನು ಭೇಟಿ ಮಾಡುವ ಅವಕಾಶ. ಕಠಿಣ ಪರಿಶ್ರಮದಿಂದ ಸಂಪೂರ್ಣ ಫಲಿತಾಂಶ ಸಿಗುತ್ತದೆ. ಆಸೆಗಳು ಈಡೇರುತ್ತವೆ. ವ್ಯಾಪಾರ–ವ್ಯವಹಾರದಲ್ಲಿ ಯಶಸ್ಸು ಪಡೆಯುವಿರಿ. ಶುಭ: 10, 16, 28 ಅಶುಭ: 12, 15, 23.



**ಕರ್ಕ:** ತಿಂಗಳ ಮಧ್ಯಭಾಗದಲ್ಲಿ ಸಹೋದರ– ಸಹೋದರಿಯರು ಬೆಂಬಲಿಸುವರು. ಸಾಧ್ಯವಿದ್ದಷ್ಟು ವಿವಾದಗಳಿಂದ ದೂರವಿರುವುದು ಉತ್ತಮ. ತಿಂಗಳ ಆರಂಭ ಮತ್ತು ಅಂತ್ಯದಲ್ಲಿ ಉತ್ತಮ ಫಲಿತಾಂಶ ಪಡೆಯುತ್ತೀರಿ. ಆರ್ಥಿಕ ನೆಮ್ಮದಿ ಇರುವುದು. ಕುಟುಂಬದಲ್ಲಿ ನೆಮ್ಮದಿ ಕಾಪಾಡಿ. ಶುಭ: 10, 16, 24 ಅಶುಭ: 11, 18, 29.



**ಸಿಂಹ:** ಜೀವನದಲ್ಲಿ ಅನೇಕ ಸವಾಲುಗಳು ಎದುರಾಗಬಹುದು. ಆರಂಭದಲ್ಲಿ ಆರ್ಥಿಕ ಸಂಕಷ್ಟ ಎದುರಾಗಬಹುದು. ಅನಂತರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ ಮತ್ತು ಆದಾಯವು ಹರಿದು ಬರಲಿದೆ. ಕೆಲಸದ ಒತ್ತಡದಿಂದ ಕುಟುಂಬಕ್ಕೆ ಸಮಯ ನೀಡಲಾಗುವುದಿಲ್ಲ. ಶುಭ: 10, 18, 29 ಅಶುಭ: 12, 19, 24.



**ಕನ್ಯಾ:** ನೀವು ಮನೆಗೆ ಅನುಗುಣವಾಗಿ ಖರ್ಚು– ವೆಚ್ಚ ಮಾಡುವಿರಿ. ಇದರಿಂದ ಮನೆಯ ಸದಸ್ಯರ ನಡುವೆ ನಿಮ್ಮ ಗೌರವ ಹೆಚ್ಚಾಗುತ್ತದೆ. ಕುಟುಂಬದಲ್ಲಿ ಶುಭಕಾರ್ಯ ಆಯೋಜಿಸುವಿರಿ. ಶುಭ ಸುದ್ದಿ ಕೇಳುವಿರಿ. ಸಹೋದ್ಯೋಗಿಯಿಂದ ಅನೇಕ ಅವಕಾಶಗಳನ್ನು ಪಡೆಯುತ್ತೀರಿ. ಶುಭ: 11, 18, 29 ಅಶುಭ: 10, 15, 27.



**ತುಲಾ:** ಉದ್ಯೋಗ ಬದಲಾವಣೆಯ ಯೋಚನೆ ಇದ್ದರೆ ಆ ಪ್ರಯತ್ನವನ್ನು ವೇಗಗೊಳಿಸಿ. ವ್ಯಾಪಾರದಲ್ಲಿ ತೊಡಗಿದ್ದರೆ, ಯಾವುದೇ ರೀತಿಯ ವಹಿವಾಟುಗಳನ್ನು ಮಾಡುವ ಮೊದಲು ಚೆನ್ನಾಗಿ ಯೋಚಿಸಬೇಕು. ವೆಚ್ಚಗಳನ್ನು ನಿಯಂತ್ರಿಸಿ. ಆರೋಗ್ಯ ಸ್ಥಿರವಾಗಿರುತ್ತದೆ. ಶುಭ: 11, 21, 28 ಅಶುಭ: 16, 22, 29.



**ವೃಶ್ಚಿಕ:** ಪೂರ್ವಜರ ಆಸ್ತಿಯ ಮಾರಾಟದಿಂದ ಲಾಭ, ಆದಾಯದಲ್ಲಿ ಹೆಚ್ಚಳ. ಇದರಿಂದ ಹೊಸ ವಾಹನ, ಮನೆ ಖರೀದಿಸುವಿರಿ, ವ್ಯಾಪಾರ–ವ್ಯವಹಾರವನ್ನೂ ವಿಸ್ತರಿಸಬಹುದು. ಸಹೋದರ– ಸಹೋದರಿಯರಿಗೆ ಸಮಯ ಉತ್ತಮವಾಗಿರುತ್ತದೆ. ಶುಭ: 11, 16, 26. ಅಶುಭ: 10, 15, 23.



**ಧನು:** ಅಪೇಕ್ಷಿತ ಫಲಿತಾಂಶಗಳನ್ನು ಪಡೆಯಲು ಪರಿಶ್ರಮ ಪಡಬೇಕಾಗುತ್ತದೆ. ಉದ್ಯೋಗ ಬದಲಾವಣೆ ಯೋಚನೆಯುಳ್ಳವರಿಗೆ ಯಶಸ್ಸು. ವೃತ್ತಿಪರರಿಗೆ ವರ್ಗಾವಣೆ ಸಾಧ್ಯತೆ. ವಿದೇಶಕ್ಕೆ ಹೋಗುವ ಅವಕಾಶ. ತಾಯಿ ಆರೋಗ್ಯದ ಬಗ್ಗೆ ಆತಂಕ. ಅವರ ಬಗ್ಗೆ ಕಾಳಜಿ ವಹಿಸಿ. ಶುಭ: 12, 20, 24 ಅಶುಭ: 11, 17, 22.



**ಮಕರ:** ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಕಾಲಕಾಲಕ್ಕೆ ಉತ್ತಮ ವೈದ್ಯರ ಸಲಹೆ ತೆಗೆದುಕೊಳ್ಳಿ. ಸರಿಯಾಗಿ ಆಹಾರ ಸೇವಿಸಿ. ವಿದೇಶ ಪ್ರಯಾಣದ ಅವಕಾಶ ಪಡೆಯುವಿರಿ. ವ್ಯಾಪಾರಸ್ಥರು ಉತ್ತಮ ಲಾಭವನ್ನು ಪಡೆಯುತ್ತಾರೆ. ಹೊಸ ಮೂಲಗಳಿಂದ ಹಣ ಹರಿದು ಬರಲಿದೆ. ಶುಭ: 12, 19, 22 ಅಶುಭ: 10, 17, 27.



**ಕುಂಭ:** ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಸುವಿರಿ. ತಂದೆ– ತಾಯಿಯ ಜೊತೆ ತೀರ್ಥಯಾತ್ರೆ ಕ್ಷೇತ್ರ ದರ್ಶನ ಮಾಡುವಿರಿ. ಜ್ವರ, ಕೆಮ್ಮು ಅಥವಾ ಶೀತದಂತಹ ಸಣ್ಣ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಶುಭ: 10, 16, 23 ಅಶುಭ: 11, 19, 28.



**ಮೀನ:** ಕುಟುಂಬ ಜೀವನದಲ್ಲಿ ಅನೇಕ ಬದಲಾವಣೆ ಎದುರಿಸಬೇಕಾಗುತ್ತದೆ. ತಾಯಿಯ ಆರೋಗ್ಯದಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳಬಹುದು. ಜಮೀನು ಖರೀದಿಸುವ ಸಾಧ್ಯತೆ ಇದೆ. ಈ ಸಮಯದಲ್ಲಿ ಮನೆಯ ಹಿರಿಯರ ಸಲಹೆ ಪಡೆದುಕೊಳ್ಳಿ. ಉದ್ಯೋಗಸ್ಥರಿಗೆ ಸ್ಥಳ ಬದಲಾವಣೆ ಇದೆ. ಶುಭ: 11, 18, 26 ಅಶುಭ: 12, 16, 22.